# ನಮ್ಮಲ್ಲಿ ಒಬ್ಬರು!



■ ಪ್ರವೀಣ ಕುಲಕರ್ಣಿ

‘ಉಂಗಲಿಲ್ ಒರುವನ್’ (ನಿಮ್ಮೊಳಗೆ ಒಬ್ಬನು) – ಇದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಆತ್ಮಕಥೆಯ ಪ್ರಥಮಾರ್ಧ. ತಮ್ಮ ಜನ್ಮದಿನದ ಸಂದರ್ಭದಲ್ಲೇ ಈ ಕೃತಿಯ ಬಿಡುಗಡೆ ಸಮಾರಂಭವನ್ನು ಚೆನ್ನೈನಲ್ಲಿ ನಡೆಸಿದ ಸ್ಟಾಲಿನ್, ಅದನ್ನೊಂದು ರಾಜಕೀಯ ಸಂದೇಶ ರವಾನಿಸುವ ವೇದಿಕೆಯನ್ನಾಗಿಯೂ ಬಳಸಿಕೊಂಡರು. ಹಲವು ಪಕ್ಷಗಳ ಮುಖಂಡರು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾಗುವ ಮೂಲಕ ಸ್ಟಾಲಿನ್‌ಗೆ ರಾಷ್ಟ್ರಮಟ್ಟದಲ್ಲೂ ಬೇರೆ ಜವಾಬ್ದಾರಿಗಳಿವೆ ಎಂಬ ಸಂದೇಶವನ್ನೂ ಸಾರಿದರು.

ದೇಶದ ಅತ್ಯಂತ ಕ್ರಿಯಾಶೀಲ ಮುಖ್ಯಮಂತ್ರಿಗಳಲ್ಲಿ ಸ್ಟಾಲಿನ್ ಅಗ್ರಶ್ರೇಣಿಯಲ್ಲಿ ನಿಲ್ಲುತ್ತಾರೆ. ತಮ್ಮ ರಾಜ್ಯದ ಹಿತಾಸಕ್ತಿ ಕಾಯುವ ಪ್ರಶ್ನೆ ಬಂದಾಗಲೆಲ್ಲ ಯಾವ ರಾಜಿಗೂ ಸಿದ್ಧರಾಗದ ಅವರ ಮನೋಭಾವ ಎಲ್ಲರ ಗಮನ ಸೆಳೆದಿದೆ. ಐಎಎಸ್ ಅಧಿಕಾರಿಗಳನ್ನು ಕೇಂದ್ರ ಸೇವೆಗೆ ಕಳಿಸುವ ಪ್ರಶ್ನೆಯೇ ಇರಲಿ, ಒಕ್ಕೂಟ ಧರ್ಮವನ್ನು ಪಾಲಿಸುವ ವಿಷಯವೇ ಆಗಿರಲಿ, ಹಿಂದಿ ಹೇರಿಕೆಯ ಹುನ್ನಾರವೇ ಇರಲಿ, ನೀಟ್‌ನಿಂದ ರಾಜ್ಯದ ವಿದ್ಯಾರ್ಥಿಗಳ ಹಿತಾಸಕ್ತಿ ಬಲಿಯಾಗುತ್ತಿರುವ ಆತಂಕವೇ ಆಗಿರಲಿ, ದಿಟ್ಟತನದಿಂದ ನಿಂತು ಕೇಂದ್ರವನ್ನು ಪ್ರಶ್ನಿಸಿದವರು ಸ್ಟಾಲಿನ್.

ತಮಿಳುನಾಡಿನ ವರ್ಣರಂಜಿತ ರಾಜಕಾರಣಿಗಳಲ್ಲಿ ಅಗ್ರಗಣ್ಯರಾದ ಎಂ. ಕರುಣಾನಿಧಿ ಅವರ ಪ್ರೀತಿಯ ಈ ಪುತ್ರ, ತಂದೆಯ ರಾಜಕೀಯ ಪಟ್ಟುಗಳನ್ನೆಲ್ಲ ಕರಗತ ಮಾಡಿಕೊಂಡವರು. ಹೊಸ ತಲೆಮಾರಿನ ಯೋಚನೆಯ ಗಾಳಿ ಎತ್ತ ಬೀಸುತ್ತಿದೆ ಎಂಬುದನ್ನು ಅರ್ಥೈಸಿಕೊಂಡು, ಅವರೊಂದಿಗೆ ಹೆಜ್ಜೆಯನ್ನೂ ಹಾಕಿದವರು. ಕರುಣಾನಿಧಿಯವರು ತಮ್ಮ ಮಗನಿಗೆ ಸ್ಟಾಲಿನ್ ಎಂದು ಹೆಸರಿಟ್ಟ ಪ್ರಸಂಗವೂ ಗಮನಾರ್ಹವಾದುದು. ಕರುಣಾನಿಧಿಯವರ ಪತ್ನಿ ದಯಾಳು ಅಮ್ಮಾಳ್ ಅವರು ಪುತ್ರನಿಗೆ ಜನ್ಮ ನೀಡಿದ ಸಂದರ್ಭದಲ್ಲೇ ರಷ್ಯನ್ ನಾಯಕ ಸ್ಟಾಲಿನ್ ತೀರಿಹೋಗಿದ್ದರು. ಅವರ ನಿಧನಕ್ಕಾಗಿ ಏರ್ಪಡಿಸಿದ್ದ ಸಂತಾಪ ಸಭೆಯಲ್ಲಿ ಭಾಷಣ ಮಾಡಿಬಂದ ಕರುಣಾನಿಧಿ, ತಮ್ಮ ಪುತ್ರನಿಗೆ ಅವರ ಹೆಸರನ್ನೇ ನಾಮಕರಣ ಮಾಡಿದ್ದರು!

ಕರುಣಾನಿಧಿ ಅವರಂತೆಯೇ ಸ್ಟಾಲಿನ್ ಕೂಡ ನಾಸ್ತಿಕರು. ಹಲವು ಪ್ರಸಂಗಗಳಲ್ಲಿ ಅವರೇ ಈ ಮಾಹಿತಿಯನ್ನು ಬಹಿರಂಗವಾಗಿ ಹಂಚಿಕೊಂಡಿದ್ದಾರೆ. ‘ಆದರೆ, ನಾನು ಯಾವುದೇ ಧರ್ಮದ, ನಂಬಿಕೆಯ ವಿರೋಧಿಯಲ್ಲ’ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ. ಇಂತಹ ನಾಯಕರಿಂದಾಗಿಯೇ ದಕ್ಷಿಣದ ಈ ದ್ರಾವಿಡರ ನೆಲ ಯಾವ ಸಿದ್ಧಾಂತಗಳ ಅಲೆಗೂ ಸೊಪ್ಪು ಹಾಕಿದ ತಾಣವಲ್ಲ. ಹಾಗೆಯೇ ಅಲ್ಲಿ ಯಾವುದೇ ಮೂಲಭೂತವಾದಕ್ಕೂ ಅವಕಾಶವಿಲ್ಲ. ಸ್ಟಾಲಿನ್ ಬೆಳೆದ ಬಗೆಯ ಹಲವು ಒಳನೋಟಗಳು ಈ ಕೃತಿಯಲ್ಲಿ ಸಿಗುತ್ತವೆ.

ಹೈಸ್ಕೂಲು ವಿದ್ಯಾರ್ಥಿ ಆಗಿದ್ದಾಗಲೇ ಸ್ಟಾಲಿನ್ ಅವರು ರಾಜಕೀಯದ ಸಂಪರ್ಕಕ್ಕೆ ಬಂದಿದ್ದರು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಮೀಸಾ ಕಾಯ್ದೆಯಡಿ ಬಂಧನಕ್ಕೂ ಒಳಗಾಗಿದ್ದರು. ಜೈಲಿನಿಂದಲೇ ಅಂತಿಮ ವರ್ಷದ ಬಿ.ಎ. ಪರೀಕ್ಷೆಯನ್ನು ಬರೆದಿದ್ದರು. ಚೆನ್ನೈಗೆ ಜನರಿಂದ ನೇರವಾಗಿ ಚುನಾಯಿತರಾದ ಮೊದಲ ಮೇಯರ್ ಆಗಿದ್ದವರು ಈ ಸ್ಟಾಲಿನ್. ಕಸ ವಿಲೇವಾರಿಗೆ ಸಮರ್ಪಕ ವ್ಯವಸ್ಥೆ ರೂಪಿಸಿದ, ಸಂಚಾರದಟ್ಟಣೆ ನಿವಾರಣೆಗೆ ಒಂಬತ್ತು ದೊಡ್ಡ ಮೇಲ್ಸೇತುವೆಗಳು ಹಾಗೂ 49 ಪುಟ್ಟ ಸೇತುವೆಗಳನ್ನು ನಿರ್ಮಿಸಿದ ಖ್ಯಾತಿಯೂ ಅವರಿಗಿದೆ. ಮೇಲ್ಸೇತುವೆಗಳು ಪೂರ್ಣಗೊಂಡಾಗ, ಅವುಗಳ ನಿರ್ಮಾಣಕ್ಕೆ ಮೀಸಲಿಟ್ಟ ಹಣದಲ್ಲಿ ಶೇ 30ರಷ್ಟು ಮೊತ್ತ ಉಳಿದಿತ್ತು ಎಂದು ದಾಖಲೆಗಳು ಹೇಳುತ್ತವೆ. ಕಾರ್ಪೊರೇಷನ್ ಶಾಲೆಗಳನ್ನು ಕಾರ್ಪೊರೇಟ್ ಮಟ್ಟಕ್ಕೆ ಏರಿಸಿದ ಶ್ರೇಯವೂ ಅವರಿಗೆ ಸಲ್ಲುತ್ತದೆ. ಚೆನ್ನೈ ನಗರ ಸುಂದರೀಕರಣಕ್ಕೆ ಸ್ಟಾಲಿನ್ ನೀಡಿದ ಕೊಡುಗೆ ದೊಡ್ಡದೆಂದು ಮಾಧ್ಯಮಗಳ ವರದಿಗಳು ಹೇಳುತ್ತವೆ.

ಎರಡನೇ ಅವಧಿಗೆ ಸ್ಟಾಲಿನ್ ಅವರು ಮೇಯರ್ ಆಗಿ ಆಯ್ಕೆಯಾದರೂ ಕೋರ್ಟ್ ಆದೇಶದಿಂದ ಅವರು ಆ ಹುದ್ದೆಯಿಂದ ನಿರ್ಗಮಿಸಬೇಕಾಯಿತು. ಮುಂದೆ ಉಪಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸುವ ಮೂಲಕ ತಂದೆಯ ಅಧಿಕಾರ ಚಲಾವಣೆಯ ಕೌಶಲವನ್ನು ಬಲು ಹತ್ತಿರದಿಂದ ನೋಡಿದವರು ಅವರು. ತಂದೆಯ ನಿರ್ಗಮನದ ಬಳಿಕ ಡಿಎಂಕೆಯ ನೇತಾರರಾಗಿ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಗೆಲುವಿನ ದಡ ತಲುಪಿಸಿದವರು.

ಕೋವಿಡ್‌ನ ಎರಡನೇ ಅಲೆ ಬಲವಾಗಿ ಬೀಸುತ್ತಿರುವಾಗ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಸ್ಟಾಲಿನ್, ಪ್ರಮಾಣವಚನ ಸ್ವೀಕರಿಸಿದವರೇ ಮೊದಲು ಮಾಡಿದ್ದು ಕೋವಿಡ್ ವಾರ್‌ರೂಮ್ ಸ್ಥಾಪನೆಯ ಆದೇಶವನ್ನು. ಆಂಬುಲೆನ್ಸ್, ಹಾಸಿಗೆ ಹಾಗೂ ಆಮ್ಲಜನಕ ಸಿಲಿಂಡರ್‌ಗಳ ವ್ಯವಸ್ಥೆ ಮಾಡಲು ಆ ವಾರ್ ರೂಮ್ ಅನ್ನು ಸಜ್ಜುಗೊಳಿಸಿದ ಶ್ರೇಯ ಅವರಿಗೆ ಸಲ್ಲುತ್ತದೆ. ಪಿಪಿಇ ಸೂಟ್ ಧರಿಸಿ ಕೋವಿಡ್ ವಾರ್ಡ್‌ಗಳಲ್ಲಿ ಓಡಾಡಿದ ಅವರು ಸೋಂಕುಪೀಡಿತರಲ್ಲಿ ವಿಶ್ವಾಸ ತುಂಬಿದ್ದರು. ಕೋವಿಡ್ ನಿರೋಧಕ ಲಸಿಕೆ ವ್ಯರ್ಥಗೊಳಿಸುವುದರಲ್ಲಿ ಮೊದಲ ಸ್ಥಾನಪಡೆದು ಕುಖ್ಯಾತಿ ಗಳಿಸಿದ್ದ ತಮಿಳುನಾಡನ್ನು ಲಸಿಕೆ ಬಳಕೆಯ ಕ್ಷಮತೆಯಲ್ಲಿ ಉನ್ನತ ಸ್ಥಾನಕ್ಕೆ ಏರಿಸಿದ್ದು ಕೂಡ ಸ್ಟಾಲಿನ್ ಅವರ ಆಡಳಿತಾವಧಿಯೇ.

ಅರ್ಥವ್ಯವಸ್ಥೆಯನ್ನು ಸುಧಾರಣೆಯ ಹಳಿಗೆ ತರಲು ಎಸ್ತರ್ ಡುಫ್ಲೊ, ರಘುರಾಂ ರಾಜನ್, ಜೀನ್ ಡ್ರೀಜ್, ಅರವಿಂದ ಸುಬ್ರಮಣಿಯನ್ ಅವರಂತಹ ಘಟಾನುಘಟಿ ಅರ್ಥಶಾಸ್ತ್ರಜ್ಞರ ಸಲಹಾ ಸಮಿತಿಯನ್ನು ಅವರು ರಚಿಸಿದರು. ದೇವಸ್ಥಾನಗಳಲ್ಲಿ ಬ್ರಾಹ್ಮಣೇತರ ಅರ್ಚಕರನ್ನು ನೇಮಿಸಲು ಯಾವುದೇ ವಿರೋಧ ಲೆಕ್ಕಿಸದೆ ಕ್ರಮ ಕೈಗೊಂಡರು. ಪತ್ರಕರ್ತರು, ಪ್ರತಿಭಟನಾಕಾರರ ವಿರುದ್ಧ ಸೇಡಿನಿಂದ ಕೇಸು ದಾಖಲಿಸಿದ್ದ ಹಿಂದಿನ ಸರ್ಕಾರದ ಕ್ರಮವನ್ನು ಸ್ಟಾಲಿನ್ ರದ್ದುಗೊಳಿಸಿದರು.

‘ಸಂವಿಧಾನ ಪ್ರತಿಪಾದಿಸಿರುವ ಒಕ್ಕೂಟ ವ್ಯವಸ್ಥೆ ಉಳಿಯಬೇಕು. ರಾಜ್ಯದ ಹಕ್ಕುಗಳನ್ನು ರಾಜ್ಯಕ್ಕೆ ಬಿಟ್ಟುಕೊಡಬೇಕು. ದೇಶದ ಎಲ್ಲ ಜನಾಂಗಗಳಿಗೆ ಸಮಾನ ಅವಕಾಶ ಸಿಗಬೇಕು’ ಎಂದು ಅವರು ಬಲವಾಗಿ ಪ್ರತಿಪಾದಿಸುತ್ತಾರೆ. ಒಳನೋಟದ ಇಂತಹ ಮಾತುಗಳಿಗಾಗಿ ಸ್ಟಾಲಿನ್ ಅವರನ್ನು ರಾಹುಲ್ ಗಾಂಧಿ, ಪಿಣರಾಯಿ ವಿಜಯನ್, ಫಾರೂಕ್ ಅಬ್ದುಲ್ಲಾ, ಮಮತಾ ಬ್ಯಾನರ್ಜಿ ಸೇರಿದಂತೆ ದೇಶದ ಹಲವು ರಾಜಕೀಯ ಮುಖಂಡರು ವಿಶೇಷ ಆಸಕ್ತಿಯಿಂದ ಗಮನಿಸತೊಡಗಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65